



# ಸ್ಯಾಂಡ್ ಪೇಪರ್ ವೈನ್!

■ ಚಿತ್ರ– ಲೇಖನ: **ಮಂಜುನಾಥ. ಡಿ.ಎಸ್.**

ನಿತ್ಯಹರಿದ್ವರ್ಣದ, ಸರ್ವಋತು ಬಳ್ಳಿ ಸ್ಯಾಂಡ್ ಪೇಪರ್ ವೈನ್ ಆಕರ್ಷಣೆ ಹಾಗೂ ಆಸಕ್ತಿ ಹುಟ್ಟಿಸುವ ಸಸ್ಯ. ಒರಟಾದ ದಪ್ಪ ಎಲೆಗಳು ಸಸ್ಯಕ್ಕೆ ಈ ಅನ್ವರ್ಥನಾಮವನ್ನು ಕೊಟ್ಟಿವೆ. ಎಲೆಗಳ ಮೇಲ್ಭಾಗ ಕಡುಹಸಿರು ಬಣ್ಣದ್ದಾಗಿದ್ದರೆ ತಳಭಾಗದ ಬಣ್ಣ ತಿಳಿಹಸಿರು.

ಮೂವತ್ತು ಅಡಿ ಎತ್ತರ ಹಾಗೂ ನಾಲ್ಕಾರು ಅಡಿ ಹರಹು ಹೊಂದಿರಬಲ್ಲ ಈ ಗಿಡದ ಲತೆಗಳಲ್ಲಿ ನಕ್ಷತ್ರಾಕಾರದ ಹೂಗಳು ಗೊಂಚಲು ಗೊಂಚಲಾಗಿ ಅರಳುತ್ತವೆ. ನೀಳ ಮಾಲೆಗಳು ನೆಲದೆಡೆಗೆ ಬಾಗಿರುತ್ತವೆ. ಈ ಜಾತಿಯ ಹೂಗಳು ಸಾಧಾರಣವಾಗಿ ನೇರಳೆ ಬಣ್ಣದ್ದಾಗಿರುತ್ತವೆ. ಅಪರೂಪವಾದರೂ ಬಿಳಿ ಬಣ್ಣದ ಹೂಗಳನ್ನು ಬಿಡುವ ಲತೆಗಳೂ ಕಂಡುಬರುತ್ತವೆ. ಅಮೆರಿಕದ ವಿಸ್ಟೇರಿಯ ಹೂವನ್ನು ಹೋಲುವ ಈ ಪುಷ್ಪ ಕ್ವೀನ್ಸ್ ರೆಥ್ ಎಂದೂ ಕರೆಯಲ್ಪಡುತ್ತದೆ.

ವೆರ್ಬೆನೇಸಿಯೇ ಕುಟುಂಬಕ್ಕೆ ಸೇರಿದ, ಬಿಳಿ ಪುಷ್ಪಗಳನ್ನು ಬಿಡುವ ಲತೆಯ ಹೆಸರು ಪೀಟ್ರಿಯ ವಲ್ಲುಬಿಲಿಸ್ ಆಲ್ಬ. ಮೆಕ್ಸಿಕೊ ಮತ್ತು ಮಧ್ಯೆ ಅಮೆರಿಕ ಮೂಲದ ಈ ಸಸ್ಯ ಬೆಚ್ಚಗಿನ ಹಾಗೂ ತೇವಾಂಶದ ವಾತಾವರಣವಿರುವ ಪ್ರದೇಶಗಳಲ್ಲಿ ಸೊಂಪಾಗಿ ಬೆಳೆಯುತ್ತದೆ. ಗ್ರೀಷ್ಮ, ವಸಂತ ಹಾಗೂ ಶರದೃತುಗಳಲ್ಲಿ ಹೂಗಳು ಯಥೇಚ್ಚವಾಗಿ ಕಂಡುಬರುತ್ತವೆ.